ಸಮಸ್ಯೆಯನ್ನು ಪರಿಹರಿಸುವುದಕ್ಕೆ ಆಗದೆ ಇರುವುದನ್ನು ಕೇವಲ 3 ತಿಂಗಳಿನಲ್ಲಿ ಬಿಪಿಎಲ್ ಕಾರ್ಡ್‌ಗೆ ಚಾಲನೆ ಕೊಡುವ ಕೆಲಸ ಮಾಡಿದ್ದು ದಿನೇಶ್ ಗುಂಡೂರಾವ್‌ರವರ ದಿಟ್ಟ ನಿಲುವು. ಅವರ ಈ ಕಾರ್ಯಕ್ಕಾಗಿ ಅಬಿನಂದನೆ ಸಲ್ಲಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪಾಧ್ಯಕ್ಷರು:–** ಈಗ ಅರಣ್ಯ ಮತ್ತು ಆಹಾರ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮುಗಿಯಿತು. ಈಗ ಸಚಿವರಿಂದ ಉತ್ತರ.

(ಗೊಂದಲ)

**ಉಪಾಧ್ಯಕ್ಷರು:–** ಇನ್ನು ಮಾತನಾಡಲು ಸಮಯವಿಲ್ಲ.

(7 ಬೆಂಗಳೂರಿನ ಪುಲಕೇಶಿ ನಗರದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರದ ಕುರಿತು ಮಾನ್ಯ ಗೃಹ ಸಚಿವರಿಂದ ಹೇಳಿಕೆ)

(ಗೊಂದಲ)

**ಶ್ರೀ ಕೆ.ಜೆ.ಜಾರ್ಜ್(ಗೃಹ ಸಚಿವರು):–** ಮಾನ್ಯ ಅಧ್ಯಕ್ಷರೆ.....

(ಗೊಂದಲ)

(ಈ ಹಂತದಲ್ಲಿ ಮಾನ್ಯ ಗೃಹ ಸಚಿವರಾದ ಶ್ರೀ ಕೆ.ಜೆ.ಜಾರ್ಜ್‌ರವರು ದಿ:11.07.2014 ರಂದು ಬೆಂಗಳೂರಿನಲ್ಲಿ ವಿದ್ಯಾರ್ಥಿನಿಯನ್ನು ಅಪಹರಿಸಿರುವ ಪ್ರಕರಣದ ಬಗ್ಗೆ ಉತ್ತರ ಹೇಳಲು ತಯಾರಾದರು, ಆದರೆ, ಗೊಂದಲದಿಂದ ಉತ್ತರ ಓದಲು ಸದಸ್ಯರು ಅವಕಾಶ ಕೊಡಲಿಲ್ಲ.)

(ಗೊಂದಲ)

**ಶ್ರೀ ಸಾ.ರಾ.ಮಹೇಶ್:–** ಮಾನ್ಯ ಉಪಾಧ್ಯಕ್ಷರೆ, 5 ನಿಮಿಷ ಸಮಯ ಕೊಡಿ.

**ಉಪಾಧ್ಯಕ್ಷರು:–** Clarification timeನಲ್ಲಿ ಕೊಡುತ್ತೇನೆ. ಮಹೇಶ್‌ರವರೆ clarification time ನಲ್ಲಿ ಮಾತನಾಡಿ.

(ಗೊಂದಲ)

**ಶ್ರೀ ಕೆ.ಜಿ. ಬೋಪಯ್ಯ:–** ಅವರು statement ಓದುವುದಕ್ಕೆ ಪ್ರಾರಂಭ ಮಾಡುತ್ತಿದ್ದಾರೆ. ನಮಗೆಲ್ಲ ಅದರ ಕಾಪಿ ಕೊಟ್ಟಿಲ್ಲ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಚರ್ಚೆಯಲ್ಲಿ ಅವಕಾಶ ಕೊಡಬಾರದೆಂದು ಹೇಳುತ್ತಿಲ್ಲ, ಚರ್ಚೆ ಮಾಡಬೇಕು, ಚರ್ಚೆಯಾಗಬೇಕು.

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ:–** ಮಾನ್ಯ ಉಪಾಧ್ಯಕ್ಷರೆ, 5 ನಿಮಿಷ ನಮಗೆ ಅವಕಾಶ ಕೊಡಬೇಕು.

(ಗೊಂದಲ)

**ಶ್ರೀ ಕೆ.ಜೆ. ಜಾರ್ಜ್(ಮಾನ್ಯ ಗೃಹ ಸಚಿವರು):–** ದಿ:11.07.2014 ರಂದು ರಾತ್ರಿ ಸುಮಾರು 12–15 ಗಂಟೆಯ ಸಮಯದಲ್ಲಿ ಫಿರ್ಯಾದುದಾರರಾದ ನೊಂದ ಯುವತಿ ಅವರ ಸ್ನೇಹಿತರೊಂದಿಗೆ ಫ್ರೇಜರ್ ಟೌನ್ ಅವರ ಅಪಾರ್ಟ್‌ಮೆಂಟ್ ಹತ್ತಿರ ಊಟ..... ..

(ಗೊಂದಲ)

**ಶ್ರೀ ಸಾ.ರಾ ಮಹೇಶ್:–** ಮಾನ್ಯ ಉಪಾಧ್ಯಕ್ಷರೆ, ಬೇರೆಯವರಿಗೆ ಗಂಟೆಗಟ್ಟಲೆ ಮಾತಾನಾಡುವುದಕ್ಕೆ ಅವಕಾಶ ಕೊಡುತ್ತೀರಿ. ನಮಗೆ 5 ನಿಮಿಷಗಳ ಅವಕಾಶ ಕೊಡುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಶ್ರೀ ಸಾ.ರಾ. ಮಹೇಶ್‌ರವರು ಸದನದ ಬಾವಿಯೊಳಗೆ ಬಂದರು. ನಂತರ ಬಿಜೆಪಿ ಹಾಗೂ ಜಾತ್ಯಾತೀತ ಜನತಾದಳದ ಕೆಲವು ಶಾಸಕರು ಮಾತನಾಡಲು ಅವಕಾಶ ಕೊಡುವಂತೆ ಕೋರಿ ಸದನದ ಬಾವಿಯೊಳಗೆ ಬಂದರು)

**ಶ್ರೀ ಎಸ್.ಸುರೇಶ್‌ಕುಮಾರ್:–** ಮಾನ್ಯ ಉಪಾಧ್ಯಕ್ಷರೆ, ಅವರು ಏನು ಓದುತ್ತಿದ್ದಾರೆ? ಗಲಾಟೆ ಅಲ್ಲಿ ನಡೆಯುತ್ತಿದೆ.

(ಗೊಂದಲ)

(ಈ ಹಂತದಲ್ಲಿ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

**ಶ್ರೀ ಕೆ.ಎಂ.ಶಿವಲಿಂಗೇಗೌಡ:–** ಈಗ ಅಧ್ಯಕ್ಷರು ಬಂದರು.

(ಗೊಂದಲ)

**ಶ್ರೀ ಜಗದೀಶ ಶೆಟ್ಟರ್:–** ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಚಾರ. ಶಾಸಕರು ಸದನದ ಬಾವಿಯೊಳಗೆ ಬಂದಿದ್ದಾರೆ.

(ಗೊಂದಲ)

**ಶ್ರೀ ಕೆ.ಜಿ. ಬೋಪಯ್ಯ:–** ಮಾನ್ಯ ಅಧ್ಯಕ್ಷರೆ, ಇದು ನಿಮ್ಮ ಕ್ಷೇತ್ರದಲ್ಲಿ ನಡೆದ ಘಟನೆಯಾಗಿದೆ.

(ಗೊಂದಲ)

**ಶ್ರೀ ಕೆ.ಜೆ. ಜಾರ್ಜ್:–** ಬೋಪಯ್ಯನವರೆ, ಅದರಲ್ಲಿ ಅಂಥ ದೊಡ್ಡದೇನಿದೆ, ನಾವು action ತೆಗೆದುಕೊಂಡಿಲ್ಲವೇ, ಹೌದು ನಡೆಯುತ್ತಿರುತ್ತದೆ. Action ತೆಗೆದುಕೊಂಡಿದ್ದೇವೆ, arrest ಮಾಡಿದ್ದೇವೆ. ಇದಕ್ಕಿಂತ ಹೆಚ್ಚಿನದು ಇನ್ನೇನು ಮಾಡುವುದಕ್ಕೆ ಆಗುತ್ತದೆ?

(ಗೊಂದಲ)

**ಶ್ರೀ ಕೆ.ಜಿ.ಬೋಪಯ್ಯ:–** ನೀವು ಒಬ್ಬ Home Minister ಆಗಿ ನಿಮ್ಮ constituency ಯಲ್ಲಿ ನಡೆದದ್ದು ಗೊತ್ತಿಲ್ಲ "I am not aware of the incident" ಎಂದು ಹೇಳಿದ್ದೀರಿ. ನಿಮ್ಮಿಂದ ಏನು ರಾಜ್ಯ ರಕ್ಷಣೆಯಾಗುತ್ತದೆ?

"I am not aware of the incident. There is a steep increase in crime..."

(ಗೊಂದಲ)

(ಈ ಹಂತದಲ್ಲಿ ಸದನದ ಬಾವಿಗೆ ಬಂದಿದ್ದಂತಹ ಜೆಡಿಎಸ್ ಮತ್ತು ಬಿಜೆಪಿ ಸದಸ್ಯರು ವಾಪಸ್ಸು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

**ಅಧ್ಯಕ್ಷರು:–** ಈಗ ಕುಳಿತುಕೊಳ್ಳಿ ಹೇಳುತ್ತೇನೆ. ನೋಡಿ ನನಗೆ ಒಂದಲ್ಲ, 10 ದಿವಸ ಕುಳಿತುಕೊಳ್ಳುವುದಕ್ಕೆ ಏನೂ ಅಭ್ಯಂತರವಿಲ್ಲ. ರಾತ್ರಿ 01 ಗಂಟೆಯವರೆಗೆ ಕುಳಿತುಕೊಳ್ಳುವುದಕ್ಕೂ ನನಗೆ ಅಭ್ಯಂತರವಿಲ್ಲ. ಎಲ್ಲಾ ಪಕ್ಷದವರು ಸೇರಿ ಸಮಯವನ್ನು ನಿರ್ಧಾರ ಮಾಡಿದ್ದಾರೆ. ಆ ಸಮಯದ ವ್ಯಾಪ್ತಿಯಲ್ಲಿ ಯಾವ್ಯಾವ ಬೇಡಿಕೆಗಳು ಎಂದು ತೀರ್ಮಾನವಾಗಿದೆ. ವಾಸ್ತವಿಕವಾಗಿ ನಿನ್ನೆಯೇ ಬೇಡಿಕೆ ತೀರ್ಮಾನವಾಗಬೇಕಿತ್ತು, ಆಗಲಿಲ್ಲ. ಇವತ್ತಿಗೂ ತಂದಿದ್ದೇವೆ. ಇವತ್ತು ಶಿಕ್ಷಣದ ಮೇಲಿನ ಬೇಡಿಕೆಯ ಕುರಿತು ಚರ್ಚೆಯಾಗಿ, ಮಾಡಬೇಕಿತ್ತು. ಅದೂ ಆಗಲಿಲ್ಲ. ಹೀಗಾದರೆ ಏನಾಗುತ್ತದೆ? ಬೇಜಾರು ಮಾಡಿಕೊಳ್ಳಬೇಡಿ. ಕೊನೆಗೆ ಯಾವುದಾದರು ಕೆಲವು ಬೇಡಿಕೆಗಳನ್ನು ಕೈ ಬಿಟ್ಟು ನೇರವಾಗಿ vote ಗೆ ಹಾಕಬೇಕಾದ ಸನ್ನಿವೇಶ ನಿರ್ಮಾಣವಾಗುತ್ತದೆ. ಹಾಗಾಗಿ ವಿನಂತಿ ಏನು ಮಾಡುತ್ತೇನೆಂದರೆ, ಕೆಲವರು ಹಿರಿಯರಾದವರು ಕಿರಿಯರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾನು ಅದಕ್ಕೆ ಹುಡುಕಿ...

(ಗೊಂದಲ)

**ಶ್ರೀ ಸಾ.ರಾ ಮಹೇಶ್:–** ನನ್ನ ಮನವಿ ಏನೆಂದರೆ, calling attention cancel ಮಾಡಿದಿರಿ. 69 cancel ಮಾಡಿದಿರಿ. ಗಮನ ಸೆಳೆಯುವ ಸೂಚನೆಗಳನ್ನು cancel ಮಾಡಿದಿರಿ.

**ಶ್ರೀ ಪಿ.ಆರ್. ಸುಧಾಕರ್ ಲಾಲ್:–** ಹಿರಿಯರು 3–3 ಗಂಟೆ ಮಾತನಾಡಿದ್ದಾರೆ. ನಮಗೆ 10–10 ನಿಮಿಷ ಕೊಡುವುದಿಲ್ಲ.

**ಅಧ್ಯಕ್ಷರು:–** ನಾನು ಮಾಡುತ್ತೇನೆ. ಅದಕ್ಕೆ ನೀವು ಪಕ್ಷದ ವತಿಯಿಂದ ಪಟ್ಟಿಯನ್ನು ಕೊಡುವ ಸಂದರ್ಭದಲ್ಲಿ □□ಯಾರ್ಯಾರ ಹೆಸರನ್ನು ಮೊದಲು ಕರೆಯಬೇಕೆಂದು ಕೊಟ್ಟರೆ ಅದರ ಪ್ರಕಾರ ನಾನು ಮಾಡುತ್ತಾ ಹೋಗುತ್ತೇನೆ. ನಾನು ಸಾಧ್ಯವಾದಷ್ಟು ಮಟ್ಟಿಗೆ ಹಿಂದೆ ಕುಳಿತವರಿಗೆ, ಹೊಸಬರಿಗೆ ಕೊಡುವ

ಪ್ರಯತ್ನವನ್ನು ನಾನು ಮಾಡುತ್ತಾ ಬಂದಿದ್ದೇನೆ. ಏನು ಮಾಡುವುದಕ್ಕೆ ಆಗುತ್ತದೆ?

**ಶ್ರೀ ಸಿದ್ದು ಬಿ. ನ್ಯಾಮಗೌಡ:–** ಮಾನ್ಯ ಅಧ್ಯಕ್ಷರೆ, ನಮಗೆ ಕೊಡಿ. . . .

ಅಧ್ಯಕ್ಷರು:– ನಿಮಗೆ ಕೊಟ್ಟಿಲ್ಲವೇನು? ಹೀಗೆ ಪ್ರತಿಯೊಂದಕ್ಕೂ ಕೈ ಎತ್ತಬೇಡಿ. ನಾನುಕೊಡುತ್ತೇನೆ. ಇರುವಂತಹ ಸಮಯದಲ್ಲಿ ...

**ಶ್ರೀ ಹೆಚ್.ಸಿ. ಬಾಲಕೃಷ್ಣ:–** ಮಾನ್ಯ ಅಧ್ಯಕ್ಷರೆ, ಆಹಾರ ಇಲಾಖೆ ಸಮಸ್ಯೆಗಳು ಜಾಸ್ತಿ ಇರುವ ಇಲಾಖೆ. ಬೇರೆಯದರ ಬಗ್ಗೆ ನಾವು demand ಮಾಡುವುದಿಲ್ಲ. ಆಹಾರ ಇಲಾಖೆಯ ಬಗ್ಗೆ ಎರಡೆರಡು ನಿಮಿಷ ಅವರವರ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುತ್ತಾರೆ. ದಯಮಾಡಿ ಅವಕಾಶ ಕೊಡಿ.

**ಶ್ರೀ ಎಂ.ಟಿ ಕೃಷ್ಣಪ್ಪ:–** ಮಾನ್ಯ ಅಧ್ಯಕ್ಷರೆ, Forest ಬಗ್ಗೆ ನಾವು ಮಾತನಾಡುವುದಿಲ್ಲ. ಕೇವಲ ಆಹಾರ ಇಲಾಖೆಯ ಬಗ್ಗೆ ಮಾತನಾಡುತ್ತೇವೆ.

**ಅಧ್ಯಕ್ಷರು:–** ಆಯಿತು ಬಿಡ್ರಪ್ಪ. ಒಂದು ಐದೈದು ನಿಮಿಷ ಮಾತನಾಡಿ.

**ಶ್ರೀ ಎಂ.ಟಿ. ಕೃಷ್ಣಪ್ಪ:–** ಮಾನ್ಯ ಅಧ್ಯಕ್ಷರೆ, ಇಲ್ಲಿ ನೋಡಿ, ಪೇಪರಿನಲ್ಲೆಲ್ಲಾ ದೊಡ್ಡದಾಗಿ ಬಂದಿದೆ. ಮೂರು ದಿನದಿಂದ server open ಆಗದೆ ಜನರು ಕ್ಯೂ ನಿಂತಿದ್ದಾರೆ.

**ಅಧ್ಯಕ್ಷರು :–** ಆಗಲೇ ಹೇಳಿದ್ದೀರಲ್ಲ, ಅದನ್ನು ಉತ್ತರ ಕೊಡುವಾಗ ಅವರು ಹೇಳುತ್ತಾರೆ. Queue ಇದೆ. ನಿನ್ನೆ ಕೂಡಾ ಮಾತನಾಡಿದ್ದೇನೆ. ಅವರು ಒಪ್ಪಿಕೊಂಡಿದ್ದಾರೆ. ಅದರಲ್ಲೇನು?

ಸಾ.ರಾ.ಮಹೇಶ್ ನೀವು ಮಾತನಾಡಿ.